ಅಷ್ಟೆ. ಕಿಸೆಯಿಂದ ಒಂದು ಲಕೋಟೆಯನ್ನು ತೆಗೆದು ಅಂಗಡಿಯವನ ಕೈಲಿರಿಸಿದ. ಅವನದನ್ನು ಕಣ್ಣಿಗೆ ಒತ್ತಿಕೊಂಡ ರೀತಿಯಲ್ಲಿ ಹಣವೋ ಅಥವಾ ಅಂತದ್ದೇ ಮತ್ತೇನೋ ಇರಬಹುದೆನ್ನುವ ಸುಳಿವು ಸಿಕ್ಕರೂ ಅದಷ್ಟಕ್ಕೆ ಎರಡು ಮೈಲಿಗಳಷ್ಟು ದೂರ ನಡೆದು ಬರುವಂಥದ್ದೇನಿರಬಹುದೆಂಬ ಅಂದಾಜು ಸಿಗಲಿಲ್ಲ. ಲೋಕಿ ಅಲ್ಲಿಂದ ಮುಂದೆ ಹೋದ ನಂತರ ಆತ್ಮಾರಾಮ ಮೊದಲ ಬಾರಿಗೆ ರಸ್ತೆಯ ಹೆಸರು ನೋಡಿದರೆ ಜೈಲು ರಸ್ತೆ! ಜೈಲಿನಲ್ಲಿ ಯಾರನ್ನೋ ನೋಡಲು ಬಂದಿರಬಹುದು; ಆದರೆ ಅಷ್ಟು ಬೆಳಗ್ಗೆ, ಆ ಅವಸರದಲ್ಲಿ! ಅವನ ಹಿಂದೆಯೇ ಹೋದ. ಲೋಕಿ ಜೈಲಿನ ಹೆಬ್ಬಾಗಿಲ ಮುಂದೆ ನಿಂತನಾದರೂ, ಹೆಚ್ಚು ಹೊತ್ತು ಕಳೆಯದೇ ಮತ್ತೆ ಮುಂದುವರೆದಾಗ ನಿಗೂಢವೆನಿಸಿತು. ರಸ್ತೆ ನಲವತ್ತು ಅಡಿ ಎತ್ತರದ ಕೋಟೆಯಂತಹ ಅದರ ಪ್ರಾಕಾರವನ್ನು ಸುತ್ತುವರೆದು ಮತ್ತೆ ಅಲ್ಲಿಗೇ ಬರಲಿದೆ ಎನ್ನುವ ಅರಿವು ಬಂದು ಅದೇ ಅಂಗಡಿಯ ಬಳಿ ನಿಂತ. ಆಗಲೇ ತಾನು ಸುಸ್ತಾಗಿ ಹೋಗಿದ್ದರ ಅರಿವು ಬಂತು.

ಆ ಅಂಗಡಿ ದೂರದಿಂದ ನೋಡಿದಾಗ ಅಂದುಕೊಂಡದ್ದಕ್ಕಿಂತ ಸಣ್ಣದಿತ್ತು, ಆದರೂ ಹೆಚ್ಚು ಸಾಮಾನುಗಳು ತುಂಬಿಕೊಂಡಿದ್ದವು. ಸಿಗರೇಟು, ಪಾನ್‌ಮಸಾಲಾ, ಬಾಳೆಹಣ್ಣು, ಸೋಡಾ… ಆ ದಾರಿಯಲ್ಲಿ ಬಂದವರಿಗೆ ಬೇಕಾಗುವ ಎಲ್ಲವೂ ಅಲ್ಲಿದ್ದವು. ಶೆಟ್ಟರ ಮುಖದಲ್ಲಿ ವ್ಯಕ್ತವಾದ "ಏನು ನಿನ್ನ ಕೆಲಸ?" ಎನ್ನುವ ಕಿರಿಕಿರಿ ತುಂಬಿದ ಪ್ರಶ್ನೆ ಈ ಅಂಗಡಿಯವನ ಮುಖದಲ್ಲಿಯೂ ಕಂಡಿತು.

'ವ್ಯಾಪಾರ ಬಹಳ ಇಲ್ಲಾ ಅಂತ ಕಾಣ್ತದೆ!?', ಆತ್ಮಾರಾಮನ ಸಣ್ಣ ಗೊಣಗು ಅವನಿಗೆ ಕೇಳಿಸಿರಬೇಕು, ಆದರೂ ಅವನಿಂದ ಬಂದದ್ದು ಪ್ರಶ್ನೆಗಳೇ.

'ಅವನನ್ನು ಯಾಕೆ ಹಿಂಬಾಲಿಸ್ತಿದ್ರಿ? ಮಫ್ತಿ ಪೋಲಿಸಾ ಸರ್?' ಮಾತಿನಲ್ಲಿದ್ದ ಗೌರವ ಮುಖದಲ್ಲಿರಲಿಲ್ಲ. ಅಂಗಡಿಯವ ಲೋಕಿಯ ಪರಿಚಯವನು, ಬಹಳ ಬೇಕಾದವನು ಎಂದು ಯಾರೂ ಊಹಿಸಬಹುದಿತ್ತು.

'ಇಲ್ಲಪ್ಪ, ಹಾಗೇನೂ ಇಲ್ಲ, ಲೋಕಿ ನನಗೂ ಬಹಳ ಬೇಕಾದವನು. ಹೋಟಲ್ಲಿನಲ್ಲಿ ಕಾಣಲಿಲ್ಲ, ಮನೆಗೆ ಹೋದೆ, ಅಲ್ಲಿಂದ ಅವನ ಹಿಂದೇ ಇಲ್ಲೀ ತನಕನೂ ಬಂದೆ. ಬೆಳಬೆಳಿಗ್ಗೇ ಎಲ್ಲಿಗೆ ಹೋಗ್ತಿದಾನೆ, ಏನು ಮಾಡ್ತಾನೆ ಅಂತ ಕುತೂಹಲ ಅಷ್ಟೆ.'

'ಅದೂ ಗೊತ್ತಿಲ್ಲದೇ ಹೋದ್ರೆ ಎಂಥಾ ಫ್ರೆಂಡು ನೀವು' ಅಂಗಡಿಯವ ಏನನ್ನೂ ಬಿಟ್ಟುಕೊಡುವ ಹಾಗೆ ಕಾಣಲಿಲ್ಲ.

'ಲೋಕಿ ಅಷ್ಟು ಸುಲಭದಲ್ಲಿ ಏನೂ ಮಾತಾಡುವ ಜನ ಅಲ್ಲ. ಆಡಿದ್ರೂ ಎಲ್ಲ ಒಗಟು. ಇವತ್ತು ಏನು ಹೇಳ್ತಾನೋ ನೋಡುವಾ. ನಾವೂ ಬಿಡು ಜನ ಅಲ್ಲ. ನಿಮಗೆ ಹ್ಯಾಂಗೆ ಪರಿಚಯ ಅವ?'

'ಅದೂ ದೊಡ್ಡ ಕಥೆ, ಹೇಳುವಂಥದ್ದಲ್ಲ. ಅದೇ, ಅಲ್ಲಿ ಕಾಣ್ತಾ ಇದೆಯಲ್ಲ, ದೊಡ್ಡ ಗೋಡೆ. ಅದರ ಒಳಗೇ ನನಗೆ ಪರಿಚಯ ಆದದ್ದು. ಇಬ್ರೂ ತಪ್ಪು ಮಾಡಿ ಸಿಕ್ಕಿಬಿದ್ದೇ ಹೋಗಿದ್ದು, ಆದರೆ ಬಹಳ ದೊಡ್ಡ ತಪ್ಪಲ್ಲ'. ಸ್ವಲ್ಪ ಹೊತ್ತು ಸುಮ್ಮನಾಗಿ ಮತ್ತೆ, ಅವನೇ ಹಾಕಿದ ಗಂಟು ಬಿಡಿಸುವವನಂತೆ, 'ಹಾಗಂತ ಈಗ ಇಬ್ಬರೂ ಆ ದಾರಿ ಬಿಟ್ಟು ಬಹಳ ಕಾಲ ಆಯ್ತು'.

'ಅದೆಲ್ಲ ಸರಿ, ಆದರೆ ಈಗ ಇಲ್ಲಿ ಲೋಕಿ ಏನು ಮಾಡ್ತಿದಾನೆ ಅನ್ನೋದು ಗೊತ್ತಾಗಿಲ್ಲ'.

'ಓ ಅದಾ ಸರ್, ಅವರಿಗೆ ಮನಸ್ಸಿಗೆ ಸರಿ ಇಲ್ದಾಗೆಲ್ಲಾ ಹೀಗೇನೆ… ಇಲ್ಲಿಗೆ ಬರೋದು, ಇಡೀ ಜೈಲು ಕಂಪೌಂಡಿಗೆ ಪ್ರದಕ್ಷಿಣೆ ಹಾಕೋದು. ಯಾಕಣ್ಣ ಹೀಂಗ ಅಂದ್ರೆ, ಈ ಜಾಗ ನಮ್ಮತ್ರ ಏನಿದೆ ಅಂತ ನೆನಪು ಮಾಡ್ತದೆ' ಅಂತಾರೆ. 'ಸ್ವಲ್ಪ ತಿಳ್ದೋರಿಗೆಲ್ಲಾ ಹೀಂಗೆ ಇರ್ಬೇಕು'.

ಅಂಗಡಿಯವನಿಗೆ ಮತ್ತೆ ಮಾತುಕತೆ ಮುಂದುವರೆಸೋದಕ್ಕೆ ಆಸಕ್ತಿ ಇದ್ದಂಗೆ ಕಾಣಲಿಲ್ಲ. ಜೋಡಿಸಿಟ್ಟ ಸಾಮಾನುಗಳನ್ನೇ ಮತ್ತೆ ಜೋಡಿಸತೊಡಗಿದ.

ಆತ್ಮಾರಾಮ ಅವನಿಗೆ ಕೃತಜ್ಞತೆ ಹೇಳಿ, ಲೋಕಿ ಹೋದ ದಾರಿಯಲ್ಲಿ, ಆಟೋಗಳು ಸಿಗುತ್ತವೋ ಅಂತ ನೋಡುತ್ತಲೇ ಅವಸರದಿಂದಲೇ ಹೋಗಲಾರಂಭಿಸಿದ. ಆತ್ಮಾರಾಮನಿಗೆ ತನ್ನ ಸಂಗತಿಗಳನ್ನು ಲೋಕಿಯಲ್ಲಿ ಹೇಳಿಕೊಳ್ಳಬೇಕಿತ್ತು, ಅದಕ್ಕಿಂತ ಹೆಚ್ಚಾಗಿ ಲೋಕಿಯನ್ನು ಕೇಳಲು ಹಲವು ಪ್ರಶ್ನೆಗಳಿದ್ದವು. ಭೇಟಿಯಾದ ಎಂಟು ವರ್ಷಗಳ ನಂತರ ಲೋಕಿ ಕಾಣಿಸತೊಡಗಿದ್ದ. ಆ ದಿನ ಆಗಷ್ಟೇ ಪೂರ್ತಿಯಾಗಿ ತೆರೆದು ಕೊಳ್ಳತೊಡಗಿತ್ತು.

●